ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181 ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

40ನೇ ವರ್ಷದಲ್ಲಿ

ಜನತಾ ಮಾಧ್ಯಮ

: ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಭಾರತದಲ್ಲಿ ಸರಾಸರಿಗಿಂತ ಕಡಿಮೆ ಮುಂಗಾರು ಮಳೆ

ಭಾರತದ ವಾರ್ಷಿಕ ಮುಂಗಾರು ಹಂಗಾಮಿನಲ್ಲಿ ಮಳೆಯ ಪ್ರಮಾಣವು ಸರಾಸರಿಗಿಂತ ಕೆಳಮಟ್ಟದಲ್ಲಿ ದಾಖಲಾಗಿದೆ ಹಾಗೂ ಮುನ್ಸೂಚನೆಗಿಂತ ಕಡಿಮೆಯಾಗಿದೆ ಎಂದು ರಾಷ್ಟ್ರೀಯ ಹವಾಮಾನ ಪರಿಣಿತರು ಹೇಳಿದ್ದಾರೆ. ಭಾರತದ ಅನೇಕ ರಾಜ್ಯಗಳಲ್ಲಿ ಭಾರೀ ನೆರೆ ಹಾವಳಿ ಸಂಭವಿಸಿದ್ದರೂ, ಕೇಂದ್ರ ಮತ್ತು ಉತ್ತರ ರಾಜ್ಯಗಳಲ್ಲಿ ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮುಂಗಾರು ಮಳೆಯಾಗಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

ಹಾರ್ದಿಕ್ ಪಾಂಡ್ಯಾಗೆ ಸರಣಿ ಶ್ರೇಷ್ಠ ಪ್ರಶಸ್ತಿ

ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಯುದ್ದಕ್ಕೂ ಸ್ಟೀವ್ ಸ್ಮಿತ್ ಪಡೆಯನ್ನು ಕಾಡಿದ ಭಾರತದ ಹಾರ್ದಿಕ್ ಪಾಂಡ್ಯಾಗೆ ಅರ್ಹವಾಗಿಯೇ ಸರಣಿ ಶ್ರೇಷ್ಠ ಪ್ರಶಸ್ತಿ ನೀಡಲಾಗಿದೆ. ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ನಡೆದ ಐದು ಏಕದಿನ ಪಂದ್ಯಗಳ ಸರಣಿಯಲ್ಲಿ ಹಾರ್ದಿಕ್ ಪಾಂಡ್ಯಾ ಒಟ್ಟು 222 ರನ್‌ಗಳು ಹಾಗೂ 6 ವಿಕೆಟ್ ಪಡೆದಿದ್ದಾರೆ. ಭಾನುವಾರ ನಡೆದ ಪಂದ್ಯದಲ್ಲೂ ಭಾರತ ಆಸೀಸ್ ವಿರುದ್ಧ ಜಯಭೇರಿ ಬಾರಿಸಿ ಸರಣಿ ವಶಪಡಿಸಿಕೊಂಡಿದೆ.



‘ದೇಶಕ್ಕಾಗಿ ಪ್ರಾಣ ನೀಡಲೂ ಸಿದ್ಧನಿದ್ದೇನೆ’

ರಾಜಕೀಯ ಪ್ರವೇಶಕ್ಕೆ ಸಿದ್ಧತೆ ನಡೆಸುತ್ತಿರುವ ನಟ ಕಮಲ್ ಹಾಸನ್ ದೇಶ ಸೇವೆಗೆ ಪ್ರಾಣ ನೀಡಲೂ ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ತಮಿಳು ಬಿಗ್ ಬಾಸ್ ಕಾರ್ಯಕ್ರಮದ ಫೈನಲ್ಸ್ ಕಾರ್ಯಕ್ರಮದಲ್ಲಿ ಮಾತನಾಡಿರುವ ಕಮಲ್ ಹಾಸನ್, ನಾನು ರಾಜಕೀಯ ಪ್ರವೇಶಿಸುವುದು ನಿಶ್ಚಿತ. ಈ ವೇದಿಕೆಯನ್ನು ನಾನು ದುರುಪಯೋಗಪಡಿಸಿಕೊಳ್ಳುತ್ತಿಲ್ಲ ಎಂದಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :324 ಸೋಮವಾರ ಅ.2, 2017 ದೂರವಾಣಿ : 268494 ಪುಟ-6 ರೂ.2-00 NO. HSN-761/ 2015-17

■ ಜೈನರ ಕಾಶಿ ಶ್ರವಣಬೆಳಗೊಳದಲ್ಲಿ ರಾಷ್ಟ್ರೀಯ ಜೈನ ವಿದ್ವತ್ ಸಮ್ಮೇಳನಕ್ಕೆ ಚಾಲನೆ

ಯುದ್ಧಗಳಿಂದಲೇ ಜಗತ್ತು ಸರ್ವನಾಶ : ದೇವೇಗೌಡ

ಶ್ರವಣಬೆಳಗೊಳ (ಶ್ರುತಕೇವಲಿ ಭದ್ರಬಾಹು ವೇದಿಕೆ): ಯುದ್ಧಗಳಿಂದಲೇ ಜಗತ್ತು ಸರ್ವನಾಶವಾಗಲಿದೆ ಎಂದು ಮಾಜಿ ಪ್ರಧಾನಿ ಹಾಗೂ ದಳ(ಎಸ್) ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಎಚ್ಚರಿಸಿದರು.

ಜೈನರ ಕಾಶಿ ಶ್ರವಣಬೆಳಗೊಳದಲ್ಲಿ ಐದು ದಿನಗಳ ಕಾಲ ನಡೆಯಲಿರುವ ರಾಷ್ಟ್ರ ಮಟ್ಟದ ಜೈನ ವಿದ್ವತ್ ಸಮ್ಮೇಳನವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಾಯಕತ್ವಕ್ಕಾಗಿ ವಿಶ್ವ ನಾಯಕರು ದೇಶ-ದೇಶಗಳ ನಡುವೆ ಯುದ್ಧ ಸಾರುತ್ತಿರುವುದು ಸರಿಯಲ್ಲ. ದೇವರು ನಿರ್ಮಿಸಿದ ಈ ಜಗತ್ತನ್ನು ಮನುಷ್ಯರಾದ ನಾವು ನಾಶ ಮಾಡುವುದು ಒಳ್ಳೆಯದಲ್ಲ . ಇಂದು ಎಲ್ಲಾ ದೇಶಗಳು ಅಣು ಬಾಂಬ್ ಹೊಂದಿದ್ದು , ತಮ್ಮನ್ನು ತಾವೇ ನಾಶ ಮಾಡಿಕೊಳ್ಳುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಭಗವಾನ್ ಬಾಹುಬಲಿ ಸ್ವಾಮಿಯ ಅಹಿಂಸಾ ಸಂದೇಶ ಪ್ರಸ್ತುತ ಸಮಾಜಕ್ಕೆ ಅತ್ಯವಶ್ಯಕವಾಗಿದ್ದು , ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಯುದ್ಧಗಳಿಂದಲೇ ಜಗತ್ತು ಸರ್ವನಾಶವಾಗಲಿದೆ ಎಂದು ಎಚ್ಚರಿಸಿದರು.

ಬಾಹುಬಲಿ ಯುದ್ಧದಲ್ಲಿ ಗೆದ್ದರೂ ವೈರಾಗ್ಯದಿಂದ ರಾಜ್ಯ ತ್ಯಾಗ ಮಾಡಿದ ಮಹಾ ಪುರುಷ. ಬಾಹುಬಲಿಯ ತ್ಯಾಗ, ಅಹಿಂಸೆಯ ಸಂದೇಶ ಇಂದಿನ ವಿಶ್ವ ನಾಯಕರುಗಳಿಗೆ ಆದರ್ಶವಾಗಬೇಕು ಎಂದರು.

ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಅಶೋಕ್ ಜೈನ್ ಬಡಜಾತ್ಯಾ ನೆರವೇರಿಸಿದರು. ಈ ಸಂದರ್ಭದಲ್ಲಿ ಜೈನ ಸಿದ್ಧಾಂತ, ಶಾಸ್ತ್ರಿ ಪರಿಷತ್, ಅರ್ಧವಾರ್ಷಿಕ, ಗೊಮ್ಮಟೇಶ, ಬಾಹುಬಲಿ ವಿಶೇಷಾಂಕಗಳ ಸ್ಮರಣ ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮುಂಬಯಿ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಬಾಲಚಂದ್ರ ವಗ್ಯಾನಿ ಮತ್ತು ಡಾ|| ಕಮಲಾ ಹಂಪನಾ ಉಪಸ್ಥಿತರಿದ್ದರು.

ಶ್ರವಣಬೆಳಗೊಳ ಶ್ರೀಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು .

ಇದೇ ವೇಳೆ ಶ್ರವಣಬೆಳಗೊಳ ಶಾಸಕ ಸಿ.ಎನ್. ಬಾಲಕೃಷ್ಣ , ವಿಧಾನ ಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಕೆ.ಆರ್.ಪೇಟೆ ಶಾಸಕ ನಾರಾಯಣ ಗೌಡ ಇದ್ದರು.

ಕಾರ್ಯಕ್ರಮ ಪ್ರಾರಂಭಕ್ಕೂ ಮುಂಚೆ ಸಮ್ಮೇಳನಾಧ್ಯಕ್ಷರನ್ನು ಸಾರೋಟಿನಲ್ಲಿ ವಿವಿಧ ಕಲಾ ತಂಡಗಳ ಜೊತೆಗೆ ಶ್ರೀಮಠದಿಂದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮುಖಾಂತರ ವೇದಿಕೆಗೆ ಕರೆತರಲಾಯಿತು.

ಮುಂದಿನ ಸಿ.ಎಂ. ಯಾರು ? ಕಾದು ನೋಡೋಣ



ಶ್ರವಣಬೆಳಗೊಳ : ಮುಂದಿನ ಚುನಾವಣೆಯಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ? ಯಾರು ಅಧಿಕಾರದ ಸೂತ್ರ ಹಿಡಿಯುತ್ತಾರೆ? ಕಾದು ನೋಡೋಣ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಸ್ಪಷ್ಟಪಡಿಸಿದರು.

ಶ್ರವಣಬೆಳಗೊಳದಲ್ಲಿ ಭಾನುವಾರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಸಿ.ಎಂ. ಯಾರಾಗುತ್ತಾರೆಂಬುದು ಗೊತ್ತಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮುಂದೆ ಕೂಡ ನಾನೇ ಸಿ.ಎಂ. ಆಗುತ್ತೇನೆ ಎಂದು ಹೇಳಿಕೆ ನೀಡಿರುವ ಕುರಿತು ದೇವೇಗೌಡರು ಪ್ರತಿಕ್ರಿಯಿಸಿ, ಎಲ್ಲಾ ಬೆಳವಣಿಗೆಯ ಬಗ್ಗೆ ಕಾದು ನೋಡೋಣ ಎಂದಷ್ಟೇ ಮಾರ್ಮಿಕವಾಗಿ ನುಡಿದರು.

ಜನ ತೀರ್ಮಾನಿಸುತ್ತಾರೆ. ಈಗಲೇ ಏನನ್ನೂ ಹೇಳುವುದು ಬೇಡ ಎಂದು ದೇವೇಗೌಡರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರನ್ನು ಎಐಸಿಸಿ ಉಪಾಧ್ಯಕ್ಷರನ್ನಾಗಿ ನೇಮಕ ಮಾಡುವ ಕುರಿತು ನಾನೇನೂ ಪ್ರತಿಕ್ರಿಯಿಸುವುದಿಲ್ಲ. ಅದು ಪಕ್ಷದ ಆಂತರಿಕ ವಿಚಾರ ಎಂದಷ್ಟೇ ಹೇಳಿದರು.

ವಿಶ್ವಕ್ಕೇ ಪಸರಿಸುವ ಉದ್ದೇಶ

ಜೈನ ವಿದ್ವತ್ ಸಮ್ಮೇಳನವು ವಿಶಿಷ್ಠವಾಗಿದೆ. ಏಕೆಂದರೆ ಇದು ವಿಭಿನ್ನ ಆಯಾಮಗಳನ್ನು ಹೊಂದಿದೆ. ಈ ಮೂಲಕ ಜೈನ ಸಾಹಿತ್ಯವನ್ನು ಇಡೀ ವಿಶ್ವಕ್ಕೆ ಪಸರಿಸುವ ಉದ್ದೇಶವಿದೆ ಎಂದು ಸಮ್ಮೇಳನಾಧ್ಯಕ್ಷ ಶ್ರೇಯಸ್ ಕುಮಾರ್ ಜೈನ್ ಬಡೋತ್ ಹೇಳಿದರು.

ಜೈನ ಶ್ರುತ ಹಾಗೂ ಅದನ್ನು ಧರಿಸಿದವರಿಬ್ಬರೂ ತೀರ್ಥಕಲ್ಪರಾಗಿದ್ದಾರೆ. ಏಕೆಂದರೆ ಅವರಿಬ್ಬರಿಂದಲೂ ಸಂಸಾರದಿಂದ ಪಾರುಗೊಳಿಸುವ ಉಪಾಯವನ್ನು ಹೇಳಲಾಗಿದೆ. ಪೂಜ್ಯ ಶ್ರೀಗಳು ಈ ಇಬ್ಬರನ್ನೂ ಗೌರವಿಸುತ್ತಾರೆ ಎಂದು ವಿವರಿಸಿದರು.

ನಾವೆಲ್ಲರೂ ಈ ವಿದ್ವತ್ ಸಮ್ಮೇಳನದ ಮೂಲಕ ಜಿನಾಗಮ ಹಾಗೂ ಆಗಮ ಅಭ್ಯಾಸಿಗಳಿಗೆ ಗೌರವದೊಂದಿಗೆ ಶ್ರೀವೃದ್ಧಿ ಮಾಡುವುದರಲ್ಲಿ ತತ್ಪರರಾಗಿದ್ದೇವೆ ಎಂದರು.

ಕಾಡಾನೆ ಹಾವಳಿ : ರೊಚ್ಚಿಗೆದ್ದ ರೈತರಿಂದ ಆರ್.ಎಫ್.ಓ.ಗೆ ದಿಗ್ಬಂಧನ

ಮುಖ್ಯಾಂಶಗಳು

- ■ ಕೋಟ್ಯಾಂತರ ರೂ. ನಷ್ಟ
- ■ ಬಾಳೆ, ಕಾಫಿ, ಮೆಣಸು ಇತ್ಯಾದಿ ಬೆಳೆ ನಾಶ
- ■ ಅಧಿಕಾರಿಗಳಿಗೆ ತೀವ್ರ ತರಾಟೆ
- ■ ಶಾಶ್ವತ ಪರಿಹಾರಕ್ಕೆ ಒತ್ತಾಯ
- ■ ಡಿ.ಎಫ್.ಓ. ವಿರುದ್ಧ ವಾಗ್ದಾಳಿ

ಆಲೂರು : ತಾಲ್ಲೂಕಿನ ಹೈದೂರು, ಕಾಡ್ಲೂರು ಸುತ್ತಮುತ್ತ 23ಕ್ಕೂ ಹೆಚ್ಚು ಕಾಡಾನೆಗಳು ಕಾಫಿ, ಬಾಳೆ, ಗದ್ದೆ ಇತರೆ ಬೆಳೆಗಳನ್ನು ನಾಶ ಮಾಡಿದ್ದು , ಇದರಿಂದ ಕೆರಳಿದ ರೈತ ಸಮೂಹ ಭಾನುವಾರ ವಲಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ದಿಗ್ಬಂಧನ ಹಾಕಿ ಪ್ರತಿಭಟನೆ ನಡೆಸಿತು.

ಕೆ.ಹೊಸಕೋಟೆ ಹೋಬಳಿ ವ್ಯಾಪ್ತಿಯಲ್ಲಿ ಸುಮಾರು 23 ಕಾಡಾನೆಗಳು 5 ಮರಿಗಳೊಂದಿಗೆ ಸುಮಾರು 20 ಹಳ್ಳಿಗಳ ವ್ಯಾಪ್ತಿಯಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದು, ಕಾಫಿ, ಬಾಳೆ, ಶುಂಠಿ, ಗದ್ದೆ ಇತರೆ ಬೆಳೆಗಳನ್ನು ತುಳಿದು ನಾಶ ಮಾಡಿದ್ದು, ಕೋಟ್ಯಾಂತರ ರೂ. ನಷ್ಟವಾಗಿದೆ. ಶನಿವಾರ ಬೆಳಗ್ಗೆ ಕಾಡ್ಲೂರು ಕೂಡಿಗೆ ವ್ಯಾಪ್ತಿಯಲ್ಲಿ ಕಾಡಾನೆಗಳ ಹಿಂಡು ತುಳಿದು ಬೆಳೆ ನಾಶ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಡಾನೆಗಳನ್ನು ಓಡಿಸಲು ಬಂದ ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ಹಾಗೂ ಸಿಬ್ಬಂದಿಯನ್ನು ಹೈದೂರು ಗ್ರಾಮದ ಬಳಿ ಗ್ರಾಮಸ್ಥರು ದಿಗ್ಬಂಧನಕ್ಕೊಳಪಡಿಸಿದರಲ್ಲದೆ, ಸ್ಥಳಕ್ಕೆ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು ಬರುವವರೆಗೂ ಇವರನ್ನು ಬಿಡುವುದಿಲ್ಲವೆಂದು ಪಟ್ಟು ಹಿಡಿದರು. *(-4ನೇ ಪುಟಕ್ಕೆ)*

ಕಣ್ಣೊರೆಸುವ ತಂತ್ರ

ಶಾಸಕ ಎಚ್. ಕೆ.ಕುಮಾರಸ್ವಾಮಿ ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಮುಂದಿನ ಮೂರು ದಿನಗಳಲ್ಲಿ ಸ್ಥಳೀಯ ಬೆಳೆಗಾರರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ಅರಣ್ಯ ಮಂತ್ರಿಗಳು ಸ್ಥಳಕ್ಕೆ ಬಂದು ಶಾಶ್ವತ ಪರಿಹಾರದ ಬಗ್ಗೆ ಕ್ರಮ ಕೈಗೊಳ್ಳುವವರೆಗೂ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ಇಲ್ಲಿನ ಜನತೆ ಹಾಗೂ ಕಾಡಾನೆಗಳ ಮಧ್ಯೆ ನಡೆಯುತ್ತಿರುವ ಸಂಘರ್ಷ ಕುರಿತು ವಿಧಾನಸಭೆಯಲ್ಲಿ ನೂರಾರು ಬಾರಿ ಮಾತನಾಡಿದರೂ ಪ್ರಯೋಜನವಾಗಿಲ್ಲ. ಸರಕಾರ ಮತ್ತು ಅಧಿಕಾರಿಗಳು ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರೆಂಟ್ ಬಿಡುತ್ತೇವೆ : ಎಚ್ಚರಿಕೆ

ಜಿಲ್ಲಾ ಅರಣ್ಯಾಧಿಕಾರಿಗಳ ಮಾತಿಗೆ ರೊಚ್ಚಿಗೆದ್ದ ಜನರು, ನಿಮ್ಮಿಂದ ಆನೆಗಳನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಪ್ರತಿ ವರ್ಷ ಬೆಳೆದ ಬೆಳೆ ಕಳೆದುಕೊಂಡು ಉಪವಾಸ ಮಲಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಗಲು ವೇಳೆಯಲ್ಲಿ ಜೀವಭಯದಿಂದ ಓಡಾಡಬೇಕಾಗಿದೆ. ಕಾಡಾನೆಗಳ ಉಪಟಳಕ್ಕೆ ಹೆದರಿ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗುತ್ತಿಲ್ಲ. ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಕೋಟ್ಯಾಂತರ ರೂ. ಬೆಳೆ ನಷ್ಟವಾಗಿದ್ದರೂ ನೂರಾರು ರೂ. ಪರಿಹಾರ ನೀಡುತ್ತಿದ್ದಾರೆ. ಈ ಕಾರಣದಿಂದ ಬೆಳೆ ಪರಿಹಾರಕ್ಕೆ ಅರ್ಜಿ ಸಲ್ಲಿಸುವುದನ್ನೇ ಕೈ ಬಿಟ್ಟಿದ್ದೇವೆ. ಈ ಕಾರಣದಿಂದ ತಕ್ಷಣ ಎಲ್ಲ ಆನೆಗಳನ್ನು ಹಿಡಿದು ಸ್ಥಳಾಂತರಿಸದಿದ್ದರೆ ನಾವೇ ಕರೆಂಟ್ ಕೊಟ್ಟು ಸಾಯಿಸುತ್ತೇವೆ. ನೀವೂ ಬನ್ನಿ , ನಿಮ್ಮನ್ನೂ ಸಾಯಿಸಿ ನಾವೂ ಸಾಯುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶೀಯ ಕಾಫಿಗೆ ಉತ್ತಮ ಬೇಡಿಕೆ

● ಪಾಳ್ಯ ಸಮೀಪ ಬಾಚನಹಳ್ಳಿಯಲ್ಲಿ ಅಂತರರಾಷ್ಟ್ರೀಯ ಕಾಫಿ ಹಬ್ಬ

ಆಲೂರು : ಪ್ರಪಂಚದಲ್ಲಿ 2ನೇ ವಾಣಿಜ್ಯ ಬೆಳೆ ಕಾಫಿ 1120ರ ಇಸವಿಯಲ್ಲೇ ನಮ್ಮ ದೇಶಕ್ಕೆ ಪರಿಚಯವಾಗಿದ್ದು , ನಮ್ಮ ಕಾಫಿಗೆ ಪ್ರಪಂಚದಲ್ಲೇ ಉತ್ತಮ ಬೇಡಿಕೆ ಇದೆ ಎಂದು ಕಾಫಿ ಮಂಡಳಿ ಅಧ್ಯಕ್ಷ ಭೋಜೇಗೌಡ ತಿಳಿಸಿದರು.

ತಾಲ್ಲೂಕಿನ ಪಾಳ್ಯ ಹೋಬಳಿಯ ಬಾಚನಹಳ್ಳಿಯಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಕಾಫಿ ಹಬ್ಬದಲ್ಲಿ ಅವರು ಮಾತನಾಡಿ, ಕಾಫಿ ಬೆಳೆಗಾರರೇ ನಮ್ಮ ಕ್ಷೇತ್ರದಲ್ಲಿ ರಸ್ತೆ, ಶಾಲೆ, ಸಾರ್ವಜನಿಕರಿಗೆ ಅನುಕೂಲವಾಗುವ ಮೂಲಭೂತ ಸೌಕರ್ಯ ಕಲ್ಪಿಸಿದ್ದಾರೆ ಎಂದು ಹೇಳಿದರು. ಹಾಸನ-ಚಿಕ್ಕಮಗಳೂರು ಕಾಫಿಯನ್ನು 107 ದೇಶಕ್ಕೆ ರಫ್ತು ಮಾಡುತ್ತಿದ್ದೇವೆ. ಸರ್ಕಾರ ಕೈ ಜೋಡಿಸಿದರೆ ಕಾಫಿ ಬೆಳೆಗಾರರು ಆರ್ಥಿಕವಾಗಿ ಸಬಲರಾಗುತ್ತಾರೆ ಎಂದು ವಿವರಿಸಿದರು.

ಸಚಿವ ಎ.ಮಂಜು ಮಾತನಾಡಿ, ಸರ್ಕಾರದ ವತಿಯಿಂದ ಬೆಳೆಗಾರರಿಗೆ ಪ್ರೋತ್ಸಾಹ ನೀಡಿ ಹೆಚ್ಚಿನ ಸವಲತ್ತು ಕಲ್ಪಿಸಲಾಗುವುದು ಎಂದರು.

ಭಾರತೀಯ ಕಾಫಿ ಮಂಡಳಿಯ ಮುಖ್ಯಸ್ಥ ಎಂ.ಕೆ. ಪ್ರದೀಪ್ ಮಾತನಾಡಿ, ಕಾಫಿ ಉಳಿದರೆ ಮಲೆನಾಡು ಉಳಿಯುತ್ತದೆ. ಪರಿಸರ ಉಳಿಯುತ್ತದೆ. *(-4ನೇ ಪುಟಕ್ಕೆ)*

> “ಪರಿಸರ ಸಮತೋಲನ ಕಾಪಾಡುವಲ್ಲಿ ಕಾಫಿ ಕೊಡುಗೆ ಹೆಚ್ಚಿದೆ. ಹಾಗಾಗಿಯೇ ಇದಕ್ಕೆ ಮಹತ್ವವನ್ನು ನೀಡಬೇಕು.
>
> -ಎಂ.ಜಿ.ದಿನೇಶ್, ನ್ಯಾಯಾಧೀಶ

> “ಕಾಫಿಯನ್ನು ಜನರಿಗೆ ಪರಿಚಯಿಸಲು ಹಾಗೂ ಜನಪ್ರಿಯಗೊಳಿಸುವ ಸಲುವಾಗಿ ಕಾಫಿ ಡೇಯನ್ನು ಬೆಳೆಗಾರರ ಒಕ್ಕೂಟ ವಿಭಿನ್ನವಾಗಿ ಆಯೋಜಿಸಿದೆ.
>
> *-ತೀರ್ಥಮಲ್ಲೇಶ್, ಬೆಳೆಗಾರರ ಒಕ್ಕೂಟ.*

ಗಂಗೂರು ಗ್ರಾಮದಲ್ಲಿ ಘರ್ಷಣೆ : ಬಂದೋಬಸ್ತ್

ಹಳೇಬೀಡು : ಗಂಗೂರು ಗ್ರಾಮದಲ್ಲಿ ಶನಿವಾರ ವಿಜಯದಶಮಿ ಅಂಗವಾಗಿ ಮೆರವಣಿಗೆ ಸಾಗುತ್ತಿದ್ದ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಕ್ಕೆ ಘರ್ಷಣೆ ಸಂಭವಿಸಿದ್ದರಿಂದ ಭಾನುವಾರದಿಂದ ಗ್ರಾಮದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಸಣ್ಣ ವಿಚಾರಕ್ಕೆ ಆರಂಭವಾದ ಜಗಳ ಕೋಮು ಗಲಭೆಯಾಗಿ ಮಾರ್ಪಟ್ಟಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಾಪುರವಾಡ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜ್ಯೋತಿ ವೈದ್ಯನಾಥನ್, ಡಿವೈಎಸ್‌ಪಿ ದಶರಥ ಮೂರ್ತಿ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿ ನಿಯಂತ್ರಿಸಿದ್ದಾರೆ. ಸ್ಥಳೀಯ ಪೊಲೀಸರು ಮಾತ್ರವಲ್ಲದೆ ಜಿಲ್ಲಾ ಸಶಸ್ತ್ರ ಪಡೆ ತುಕಡಿ ಗ್ರಾಮದಲ್ಲಿ ವಾಸ್ತವ್ಯ ಹೂಡಿದೆ.

ಮೆರವಣಿಗೆಯಲ್ಲಿದ್ದ ಗ್ರಾಮದ ಪರಿಶಿಷ್ಟ ಜನಾಂಗದ ವಾದ್ಯ ತಂಡದ ಮೇಲೆ ಹಲ್ಲೆ ಮಾಡುವ ಪ್ರಯತ್ನ ನಡೆದಿದ್ದರಿಂದ ಮಾತಿನ ಚಕಮಕಿ ನಡೆದಿದ್ದಲ್ಲದೆ, ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿತು ಎಂದು ಗ್ರಾಮದ ಕೆಲವರು ಹೇಳುತ್ತಾರೆ. ವಾದ್ಯ ತಂಡದೊಂದಿಗೆ ಕುಣಿಯುತ್ತಿದ್ದಾಗ ಸವರ್ಣೀಯರು ಅಡ್ಡಿಪಡಿಸಿದ್ದಲ್ಲದೆ, ಹಲ್ಲೆ ಮಾಡಲು ಬಂದರು ಎಂದು ಮತ್ತಷ್ಟು ಮಂದಿ ಹೇಳುತ್ತಾರೆ. ದೇವಾಲಯ ಪ್ರವೇಶ ವಿಚಾರದಲ್ಲಿ ಹಿಂದೆ ಸವರ್ಣೀಯರು ಹಾಗೂ ಪರಿಶಿಷ್ಟ ಜನಾಂಗದವರಿಗೂ ಘರ್ಷಣೆ ನಡೆದಿತ್ತು. ಈ ಸಂದರ್ಭದಲ್ಲಿ ಹಲವು ಸುತ್ತಿನ ಶಾಂತಿ ಸಭೆ ನಡೆದಿತ್ತು.

ಗ್ರಾಮದಲ್ಲಿ ನಡೆದ ಘರ್ಷಣೆಯ ಕುರಿತು ಪ್ರಕರಣ ದಾಖಲಾಗಿದೆ. ಗ್ರಾಮದಲ್ಲಿ ಈಗ ಶಾಂತಿಯ ವಾತಾವರಣ ಇದೆ ಎನ್ನುತ್ತಾರೆ ಹಳೇಬೀಡು ಪೊಲೀಸರು.

ಬೈಕ್‌ಗೆ ಬಸ್ ಡಿಕ್ಕಿ: ಸವಾರ ಸಾವು

ಸಕಲೇಶಪುರ : ಸರ್ಕಾರಿ ಬಸ್ಸೊಂದು ಬೈಕ್‌ಗೆ ಡಿಕ್ಕಿಯಾದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ಇಲ್ಲಿನ ಕಿರುಗುಂದ ಸೇತುವೆ ಬಳಿ ಭಾನುವಾರ ಬೆಳಿಗ್ಗೆ ನಡೆದಿದೆ.

ಸಕಲೇಶಪುರದಿಂದ ಮೂಡಿಗೆರೆ ಕಡೆಗೆ ಬೈಕ್‌ನಲ್ಲಿ ಹೋಗುತ್ತಿದ್ದ ಇಲ್ಲಿನ ಆರ್.ಆರ್.ಎಸ್. ಮೆಸ್ ಮಾಲೀಕ ನವೀನ್ (36) ಎಂಬುವವರಿಗೆ ಸಕಲೇಶಪುರ ಕಡೆಗೆ ಬರುತ್ತಿದ್ದ ಬಸ್ ಡಿಕ್ಕಿ ಹೊಡೆಯಿತು. ನವೀನ್ ಸ್ಥಳದಲ್ಲೇ ಸಾವನ್ನಪ್ಪಿದರು.

ಈ ಬಗ್ಗೆ ಗೋಣಿಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಡಿಲು ಬಡಿದು ಮಹಿಳೆ, ಹೋರಿ ಸಾವು

ಅರಸೀಕೆರೆ : ಭಾನುವಾರ ಬೆಳಿಗ್ಗೆ ಸುರಿದ ಭಾರೀ ಮಳೆ ವೇಳೆ ಬಡಿದ ಸಿಡಿಲಿಗೆ ದೊಡ್ಡಘಟ್ಟದ ಮಹಿಳೆ ಲಕ್ಷ್ಮಮ್ಮ (40) ಮತ್ತು ಹೋರಿಯೊಂದು ಸಾವನ್ನಪ್ಪಿರುವ ಘಟನೆ ವರದಿಯಾಗಿದೆ.

ಗಾಂಧೀಜಿ ವಿಚಾರಧಾರೆ ಪ್ರಚಾರ ಅತ್ಯಗತ್ಯ

ಮಹಾತ್ಮ ಗಾಂಧೀಜಿ ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರುಗಳ ಜಯಂತಿ ಆಚರಣೆಯ ದಿನ ಇಂದು.

ಗಾಂಧೀಜಿಯವರ 148ನೇ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ನಗರದ ಸ್ವಾತಂತ್ರ್ಯ ಹೋರಾಟಗಾರ, ಕರ್ನಾಟಕ ಏಕೀಕರಣ ಹೋರಾಟಗಾರ ಹಾಗೂ ಮಾಜಿ ಕಮಾಂಡೆಂಟ್ 86 ವರ್ಷದ ಹೆಚ್.ಎಂ.ಶಿವಣ್ಣ ಅವರನ್ನು ‘ಜನತಾಮಾಧ್ಯಮ’ ಮಾತನಾಡಿಸಿತು.

★ಗಾಂಧೀಜಿಯವರನ್ನು ನೀವು ಖುದ್ದಾಗಿ ಭೇಟಿಯಾಗಿದ್ದೀರಾ? ಪ್ರಸುತ್ತ ಗಾಂಧೀಜಿ ವಿಚಾರಧಾರೆಗಳು ನಿಮ್ಮನ್ನು ಆಕರ್ಷಿಸಿದ್ದು ಹೇಗೆ?

-ನಾನು ಗಾಂಧೀಜಿಯವರನ್ನು ಎಂದೂ ಭೇಟಿ ಮಾಡಿಲ್ಲ. ಬ್ರಿಟೀಷರ ಗುಲಾಮಗಿರಿಯಿಂದ ಭಾರತವನ್ನು ಬಿಡುಗಡೆ ಮಾಡಲು ಅನೇಕ ರೀತಿಯ ಹೋರಾಟ ಮಾರ್ಗಗಳನ್ನು ರೂಪಿಸಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರೆಲ್ಲರನ್ನೂ ಸ್ಮರಿಸಬೇಕಾಗಿರುವುದು ಎಲ್ಲರ ಆದ್ಯ ಕರ್ತವ್ಯ.

ಅಂದು ಅರಸೀಕೆರೆಗೆ ರೈಲಿನಲ್ಲಿ ಬಂದು, ನಂತರ ಹಾಸನ, ಬೇಲೂರಿಗೆ ಭೇಟಿ ನೀಡಿ ಹೊಳೆನರಸೀಪುರ ಮಾರ್ಗವಾಗಿ ನಂಜನಗೂಡು ತಲುಪಿದ ಗಾಂಧೀಜಿ, ಸಮೀಪದ ಬದನವಾಳು ಗ್ರಾಮಕ್ಕೆ ಭೇಟಿ ಕೊಟ್ಟಿದ್ದಾರೆ. ಅಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಪ್ರಾರಂಭಿಸಿದ್ದ ಖಾದಿ ಉತ್ಪಾದನಾ ಕೇಂದ್ರವನ್ನು ಕಂಡು ಗಾಂಧೀಜಿ ಬಹಳ ಸಂತಸಪಟ್ಟರಂತೆ ಎಂದರು.

ಮುಂದುವರಿದು ಮಾತನಾಡಿದ ಶಿವಣ್ಣ ಅವರು, ಗಾಂಧೀಜಿಯವರ ವಿಚಾರಧಾರೆಗಳಿಗೆ ಆಕರ್ಷಿತನಾಗಲು ಕಾರಣಕರ್ತರಾದ ಹಳೇ ಮೈಸೂರು ಪ್ರಾಂತ್ಯದ ವಕೀಲ ಹೆಚ್.ಸಿ.ದಾಸಪ್ಪ ಮತ್ತು ಅವರ ಪತ್ನಿ ಪದ್ಮಭೂಷಣೆ, ಕರ್ನಾಟಕ ಕಸ್ತೂರಬಾ ಎಂದೇ ಹೆಸರುವಾಸಿಯಾಗಿದ್ದ ಯಶೋಧರ ದಾಸಪ್ಪ ಅವರನ್ನು ಶಿವಣ್ಣ ಅವರು ಸ್ಮರಿಸಿಕೊಂಡರು.

ಯಶೋಧರ ದಾಸಪ್ಪ ಅವರ ಮನೆಯಲ್ಲೇ ಅವರ ಜೊತೆಗಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ತವಕಿಸುತ್ತಿದ್ದೆ. ಮೈಸೂರಿನಲ್ಲಿ ವಕೀಲ ದಾಸಪ್ಪರವರ ಮನೆ ಜೈಲಾಗಿ ಪರಿವರ್ತನೆ ಆಗಿತ್ತು. ಅಲ್ಲಿಗೆ ಮಾಜಿ ಸಚಿವ ಎಂ.ಕೃಷ್ಣಪ್ಪ , ಎಂ.ಎನ್.ಜೋಯಿಸ್, ಸಿದ್ದಲಿಂಗಯ್ಯ, ಸುನಂದಮ್ಮ , ಮಾದೇಗೌಡ, ಬಾಳೆಹಣ್ಣಿ ನಂಗಡಿ ಶಿವಣ್ಣ, ವಿಜಯ ಪತ್ರಿಕೆ ಸಂಪಾದಕ ರಾಮಣ್ಣ, ಸಿ.ಜೆ.ದೇವನಾಥ್, ಪಿ.ಎಂ.ಚಿಕ್ಕಬೋರಯ್ಯ ಮತ್ತು ದೊಡ್ಡತಮ್ಮಯ್ಯ ಮುಂತಾದವರು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದರೆಂದು ಅವರು ವಿವರಿಸಿದರು.

★ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ನೀವು ಎಷ್ಟು ದಿವಸ ಜೈಲು ವಾಸ ಅನುಭವಿಸಿದಿರಿ?

- ಮೈಸೂರಿನಲ್ಲಿದ್ದಾಗ 1947ರಲ್ಲಿ ಏಳು ದಿವಸಗಳ ಕಾಲ ಜೈಲುವಾಸ ಅನುಭವಿಸಿದೆ. ಗಾಂಧಿ ಮತ್ತು ಗಾಂಧಿ ವಿಚಾರಧಾರೆಗಳು ಮತ್ತು ಸರ್ವೋದಯ ವಿಚಾರಧಾರೆಗಳ ಕಡೆಗೆ ನನ್ನ ಆಕರ್ಷಣೆ ಹೆಚ್ಚಲು ಹಾಗೂ ನನ್ನ ಸುಸ್ಥಿರ ಬದುಕಿಗೆ ಯಶೋಧರ ದಾಸಪ್ಪ ಕುಟುಂಬ ಪ್ರತ್ಯಕ್ಷ ಕಾರಣ.

★ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಪುಟಗಳನ್ನು ಓದಿದಾಗ ಹಲವು ಹಂತಗಳ ಹೋರಾಟ ಕಂಡು ಬರುತ್ತದೆ. ಅದರಲ್ಲಿ ಪ್ರಮುಖ ಹಂತಗಳನ್ನು ಹೆಸರಿಸುವಿರಾ?

-ನಾಲ್ಕು ರೀತಿಯ ಹಂತಗಳ ಹೋರಾಟ ಕಂಡು ಬರುತ್ತದೆ. ಮಂದಗಾಮಿ ಹೋರಾಟ, ತೀವ್ರಗಾಮಿ ಹೋರಾಟ, ಉಗ್ರಗಾಮಿ ಹೋರಾಟ ಹಾಗೂ ಅಹಿಂಸಾತ್ಮಕ ಹೋರಾಟ ಎಂದು ಹೆಸರಿಸಬಹುದು. ಎಷ್ಟೋ ಜನ ಸ್ವಾತಂತ್ರ್ಯ ಹೋರಾಟಗಾರರು ಸರ್ವಸ್ವ ಕಳೆದುಕೊಂಡು ಹುತಾತ್ಮರಾಗಿದ್ದಾರೆ. *(-4ನೇ ಪುಟಕ್ಕೆ)*

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನೆನೆಯುತ್ತಾ...



ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಭಾರತ ಸ್ವಾತಂತ್ರ್ಯದ ಚಳವಳಿಯ ಅಗ್ರಗಣ್ಯ ನಾಯಕರು. ಈ ಜಗತ್ತು ಕಂಡಿರುವ ಅಪೂರ್ವ ವ್ಯಕ್ತಿ. ಅಹಿಂಸಾ ಸತ್ಯಾಗ್ರಹಗಳಿಂದ ಬ್ರಿಟೀಷರನ್ನು ಮಣಿಸಿ ನಮಗೆ ಸ್ವಾತಂತ್ರ್ಯ ತಂದು ಕೊಟ್ಟರು ಎಂದು ವಿವರಿಸಬೇಕಿಲ್ಲ.

ಬ್ರಿಟೀಷರನ್ನು ಸತ್ಯಾಗ್ರಹವೆಂಬ ಆತ್ಮಬಲದಿಂದ ಮಣಿಸಿ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯವರು ನಿಸ್ವಾರ್ಥತೆ, ರಾಷ್ಟ್ರಭಕ್ತಿ, ಸತ್ಯ, ಅಹಿಂಸೆ, ಸಾಮರಸ್ಯ, ಸಾಮಾಜಿಕ ಕಾಳಜಿ ಹೊಂದಿದ್ದ ಜಗತ್ತಿನ ಜೀವಂತ ಭಕ್ತಿಯಾಗಿದ್ದರು. ಗಾಂಧಿಯವರ ಕುರಿತು ಹಲವರು ‘ಜನತಾ ಮಾಧ್ಯಮ’ಕ್ಕೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಸ್ವಾವಲಂಬನೆ ಹೊಂದಬೇಕಿದೆ

ನಾಗರಾಜ್, ಉಪವಿಭಾಗಾಧಿಕಾರಿ, ಹಾಸನ.

ಸಂಪೂರ್ಣವಾಗಿ ಜನ ಸಮುದಾಯ ಇತಿಹಾಸ ಮರೆತಿದೆ. ಗಾಂಧೀಜಿಯವರ ತತ್ವಗಳನ್ನು ಕೃತಿಯಲ್ಲಿ ಅಳವಡಿಸಿಕೊಳ್ಳಬೇಕು. ಗಾಂಧೀಜಿಯವರ ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತ. ಈ ವಿಚಾರಧಾರೆಯನ್ನು ಉದಾಸೀನತೆ ಮಾಡಿದರೆ ಮುಂದೊಂದು ದಿನ ದುಸ್ಥಿತಿಯ ಹಂತಕ್ಕೆ ತಲುಪಬೇಕಾಗುತ್ತದೆ.

ಜನಸಂಖ್ಯೆ ಇರುವ ಭಾರತ ದೇಶದಲ್ಲಿ ಸದ್ಯ ದುಡಿಯುವ ಕೈಗಳಿಗೆ ಕೆಲಸ ಕೊಡಬೇಕು. ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ನೀಡಬೇಕು. ಗ್ರಾಮೀಣರ ವಲಸೆ ತಡೆಗಟ್ಟಲೇಬೇಕು. ಇನ್ನೊಬ್ಬರ ಮೇಲೆ ಯಾರೂ ಕೂಡ ಅವಲಂಬಿತವಾಗಬಾರದು. ಅವಲಂಬನೆ ದುರದೃಷ್ಟಕರ. ಸ್ವರಾಜ್ ಮಾದರಿಯಲ್ಲಿ ಗ್ರಾಮಗಳು ಅಭಿವೃದ್ಧಿ ಹೊಂದಿ ಸ್ವಾವಲಂಬನೆ ಹೊಂದಬೇಕು.

ಚಿಂತನೆಗಳನ್ನು ಅಪ್ಪಿಕೊಳ್ಳಬೇಕು

ನಮ್ಮ ಗ್ರಾಮಗಳ ಶೇಕಡ ಅರ್ಧದಷ್ಟು ಜನರು ಬೆಂಗಳೂರು ವಾಸಿಗಳಾಗಿದ್ದಾರೆ. ದಿನೇ ದಿನೇ ಗ್ರಾಮಗಳನ್ನು ತೊರೆಯುವ ಜನರ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತಿದೆ. ವ್ಯವಸಾಯ ಮಾಡುವುದು ಜೂಜಿನ ಕೆಲಸವಾಗಿದೆ. ಮಳೆಯನ್ನು ಆಶ್ರಯಿಸಿದ ನಮ್ಮ ರೈತರು ದಿನೇ ದಿನೇ ಕಷ್ಟಕಾರ್ಪಣ್ಯಗಳನ್ನು ಎದುರಿಸುತ್ತಿದ್ದಾರೆ. ಉಪ್ಪು , ಎಣ್ಣೆ ಎರಡಕ್ಕೆ ಮಾತ್ರ ಅವಲಂಬಿತರಾಗಿದ್ದ ನಮ್ಮ ಗ್ರಾಮೀಣ ಜನತೆ ಪ್ರಸ್ತುತ ಎಲ್ಲದಕ್ಕೂ ಸರ್ಕಾರವನ್ನು ಹಾಗೂ ಇತರ ಸಂಸ್ಥೆಗಳ ಮೇಲೆ ಅವಲಂಬಿತರಾಗಿದ್ದಾರೆ.

ಈ ಎಲ್ಲವನ್ನೂ ಗಮನಿಸಿದಾಗ ನಮಗೆ ಗಾಂಧೀಜಿಯವರು ಹಾಗೂ ಅವರ ಚಿಂತನೆಗಳು ಹಿಂದೆಂದಿಗಿಂತಲೂ ಪ್ರಸ್ತುತವಾಗುತ್ತಿವೆ. ಗಾಂಧೀಜಿ ಹಾಗೂ ಕಸ್ತೂರಬಾ ಅವರ 150ನೇ ಜನ್ಮ ದಿನೋತ್ಸವ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ನಾವು ಗಾಂಧೀಜಿ ಹಾಗೂ ಅವರ ಚಿಂತನೆಗಳನ್ನು ಅಪ್ಪಿಕೊಳ್ಳಬೇಕಾದ ಅನಿವಾರ್ಯತೆ ಇದೆ.

> “ಗಾಂಧೀಜಿ ವಿಚಾರಗಳು ಅರ್ಥಪೂರ್ಣವಾಗಿವೆ. ಅವರ ವಿಚಾರಧಾರೆ ಅಳವಡಿಸಿಕೊಂಡರೆ ದೇಶ ಪ್ರೇಮ ಇಮ್ಮಡಿಯಾಗುತ್ತದೆ. ಗಾಂಧಿ ಅವರನ್ನು ಇವೊತ್ತಿಗೂ ಇಡೀ ದೇಶ ರಾಷ್ಟ್ರಪಿತ ಎಂದು ಗೌರವಿಸುತ್ತದೆ. ಅವರ ಬಗ್ಗೆ ದೇಶವಾಸಿಗಳಲ್ಲದೆ ಪ್ರಪಂಚದ ವಿವಿಧ ಜನರೂ ಗೌರವಿಸುತ್ತಾರೆ.
>
> ಯುವ ಜನತೆ ಇಂದು ದಿಕ್ಕು ತಪ್ಪುತ್ತಿದೆ. ಅವರನ್ನು ಸರಿದಾರಿಗೆ ತರಬೇಕಾದರೆ ಗಾಂಧಿ ತತ್ವದಿಂದ ಮಾತ್ರ ಸಾಧ್ಯ. ಗಾಂಧಿವಾದಿಗಳು ಈ ನಿಟ್ಟಿನಲ್ಲಿ ಯುವ ಜನರನ್ನು ಎಚ್ಚರಿಸುವ ಕೆಲಸ ಮಾಡಬೇಕು.
>
> *-ಸಿ.ಎಸ್.ಕೃಷ್ಣಸ್ವಾಮಿ, ಅಧ್ಯಕ್ಷರು, ಹಿರಿಯ ನಾಗರಿಕರ ವೇದಿಕೆ*

> “ಗಾಂಧೀಜಿ ಕನಸುಗಳು ನನಸಾಗಿಲ್ಲ. ಭಗ್ನಗೊಂಡಿದೆ. ಇಂದು ಜಾತಿ ನಿರ್ಮೂಲನೆ ಆಗಿಲ್ಲ . ಮತ್ತಷ್ಟು ಉಲ್ಬಣಗೊಂಡಿದೆ. ಇಂದು ಮನುಷ್ಯ ಆಸೆಗಳನ್ನಷ್ಟೇ ಪೂರೈಸಿಕೊಳ್ಳದೆ ದುರಾಸೆಗಳನ್ನು ಅಪ್ಪಿಕೊಳ್ಳುತ್ತಿದ್ದಾನೆ. ಅದರ ಪರಿಣಾಮವೇ ಇಂದು ಹಾಹಾಕಾರಕ್ಕೆ ಕಾರಣವಾಗಿದೆ. ಸಾಮಾಜಿಕ ಅಸಮತೋಲನಕ್ಕೆ ಅವಕಾಶ ಮಾಡಿಕೊಟ್ಟಿದೆ. ಗುಡಿ ಕೈಗಾರಿಕೆಗಳನ್ನು ಬೃಹತ್ ಕೈಗಾರಿಕೆಗಳು ನುಂಗಿ ಹಾಕಿವೆ. ಕೈ ಕಸುಬುಗಳಿಗೆ ಇಂದು ಮನ್ನಣೆ ಇಲ್ಲವಾಗಿದೆ.
>
> -ಹೆಚ್.ಆರ್.ಸ್ವಾಮಿ, ಪ್ರಾಂಶುಪಾಲರು, ಬಾಳೇನಹಳ್ಳಿ ಪಿಯು ಕಾಲೇಜು.

> “ಗಾಂಧೀಜಿ ಕನಸು ನನಸಾಗುತ್ತಾ ಇಲ್ಲ. ಜಾತಿ ನಿರ್ಮೂಲನೆ ಆಗಬೇಕು, ಭ್ರಷ್ಟಾಚಾರ ತೊಲಗಬೇಕು, ಸಾಮಾಜಿಕ ಸಮಾನತೆಯ ದೇಶ ಸೃಷ್ಟಿಯಾಗಬೇಕು. ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು ಇರಬೇಕು ಎಂದು ಕನವರಿಸುತ್ತಿದ್ದ ಗಾಂಧಿ ಕನಸು ಇಂದು ಸರ್ವನಾಶವಾಗುತ್ತಿದೆ. ದೇಶದ ತುಂಬೆಲ್ಲಾ ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಭ್ರಷ್ಟಾಚಾರ ಮಾಡದಿದ್ದವನು ಮನುಷ್ಯನೇ ಅಲ್ಲ ಎಂಬ ದುರ್ಭಾವನೆ ಮೂಡಿದೆ.
>
> *-ಮೇಟಿಕೆರೆ ಹಿರಿಯಣ್ಣ, ನಿವೃತ್ತ ಉಪನ್ಯಾಸಕರು ಹಾಗೂ ಸಾಹಿತಿ*

> “ಗಾಂಧಿ ಜಯಂತಿಯಂದು ಮಾತ್ರ ರಾಜಕಾರಣಿಗಳು ಭಾಷಣ ಬಿಗಿಯುತ್ತಾರೆ. ಒಂದು ದಿನಕ್ಕೆ ಮಾತ್ರ ಗಾಂಧೀಜಿ ನೆನಪಾಗುತ್ತಾರೆ. ನಂತರ ಯಾರಿಗೂ ಗಾಂಧೀಜಿ ಬೇಕಾಗಿಲ್ಲ. ಯಾರೊಬ್ಬರೂ ಅವರ ಆದರ್ಶಗಳನ್ನು ಪಾಲಿಸುತ್ತಿಲ್ಲ. ರಾಮರಾಜ್ಯದ ಕನಸು ಕಾಣುತ್ತಿದ್ದ ಗಾಂಧೀಜಿಯವರು ‘ಹಳ್ಳಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾದಂತೆ’ ಎಂದು ಪರಿತಪಿಸುತ್ತಿದ್ದರು. ದೇಶದ ಶೇ.70 ಭಾಗ ಗ್ರಾಮೀಣ ಪ್ರದೇಶಾಭಿವೃದ್ಧಿಗೆ ಶ್ರಮಿಸಬೇಕು.
>
> *-ಹೆಚ್.ಆರ್.ಮಂಜಪ್ಪಗೌಡ, ನಿವೃತ್ತ ಪ್ರಾಂಶುಪಾಲರು, ಹಾಸನ.*